ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ., ಮೂಡಿಗೆರೆ.

ಸಿ.ಸಿ ನಂಬರ್ಃ **954/2023**

ಪಿರ್ಯಾದಿಃ ರಾಜ್ಯ, ಪರವಾಗಿ ಕಳಸ ಪೊಲೀಸ್ ಠಾಣೆ,

ವಿರುದ್ಧ

ಆರೋಪಿ : ಸಂದೀಪ್ ಕುಮಾರ್ ಎಂ.
ಬಿನ್ ಮಂಜುನಾಥ್ ಡಿ.ಆರ್.
ವಯಸ್ಸು ಸುಮಾರು 32 ವರ್ಷ,
ವಾಸಃ ನಿಡುವಾಳೆ ಗ್ರಾಮ,
ಬಾಳೂರು ಹೋಬಳಿ, ಮೂಡಿಗೆರೆ
ತಾಲ್ಲೂಕು, ಚಿಕ್ಕಮಗಳೂರು.

* * * * *

ದಂಡ ಪ್ರಕ್ರಿಯಾ ಸಂಹಿತೆ **313** ರ ಅಡಿಯಲ್ಲಿ ಮಾಡಿಕೊಳ್ಳಲಾದ ಆರೋಪಿತರ ಹೇಳಿಕೆ

ಪ್ರಶ್ನೆ 1) ಅಭಿಯೋಜನೆಯ ಪರ ಹಾಜರಾದ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿದ್ದೀರಾ?

ಆರೋಪಿಯ ಉತ್ತರಃ

ಪ್ರಶ್ನೆಃ 2) ಪ್ರಾಸಾ-1 ಸರಿತಾ ವಾಜ್ ರವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 27.05.2023 ರಂದು ಅವರು, ಚಾಸಾ-7, ಚಾಸಾ-8 ಮತ್ತು ಆಂಟೋನಿ ಮಥಾಯಿಸ್ ರವರೊಂದಿಗೆ ಬೆಂಗಳೂರಿನಿಂದ ಹೊರನಾಡಿಗೆ ಅವರ ಗಂಡನ ಕಾರಿನ ಸಂಖ್ಯೆಃ ಕೆಎ-05-ಎನ್ ಬಿ-3270 ರಲ್ಲಿ ಹೋಗುತ್ತಿರುವಾಗ, ಬೆಳಗ 11.30 ರ ಸುಮಾರಿಗೆ ಕಲ್ಮಕ್ಕಿಯ ಬಳಿ ರಸ್ತೆಯ ತಿರುವಿನಲ್ಲಿ ಆರೋಪಿಯು ಅನ್ನಪೂರ್ಣೇಶ್ವರಿ ಬಸ್ ಸಂಖ್ಯೆ ಕೆಎ-18-ಬಿ-1419 ರನ್ನು ಅತಿ ವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ರಸ್ತೆಯ ಬಲಬದಿಯಲ್ಲಿ ಬಂದು ಎಡಬದಿಯಲ್ಲಿ ಹೋಗುತ್ತಿದ್ದ ನಮ್ಮ ಕಾರಿಗೆ ಡಿಕ್ಕಿಪಡಿಸಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 3) ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅದರ ಪರಿಣಾಮ ಅವರ ಸ್ಥಳದಲ್ಲಿ ಗಾಬರಿಯಾಗಿ ಅವರ ತಂದೆಯನ್ನು ನೋಡಿದಾಗ ಅವರು ಏನನ್ನೋ ಹೇಳಲು ಪ್ರಯತ್ನಿಸುತ್ತಿದ್ದು, ನಂತರ ಅಲ್ಲಿದ್ದ ಜನರು ಒಂದು ಸುಮೋ ವಾಹನದಲ್ಲಿ ಅವರ ತಂದೆಯನ್ನು ಕಳಸ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಆಸ್ಪತ್ರೆಯಲ್ಲಿನ ವೈದ್ಯರು ನನ್ನ ತಂದೆ

ಮೃತಪಟ್ಟಿರುವುದಾಗಿ ತಿಳಿಸಿದರು ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 4) ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅಪಘಾತದಿಂದ ಅವರ ಎದೆಯ ಭಾಗಕ್ಕೆ, ಚಾಸಾ-7 ಮತ್ತು 8 ರವರಿಗೂ ಸಹ ಗಾಯಗಳಾಗಿದ್ದು, ಅದೇ ದಿನ ಮಧ್ಯಾಹ್ನ ಕಳಸ ಪೊಲೀಸ್ ಠಾಣೆಗೆ ಹೋಗಿ, ಬಸ್ ಚಾಲಕನ ವಿರುದ್ದ ದೂರು ದಾಖಲಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 5) ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಪೊಲೀಸರು ಅವರನ್ನು ಅಪಘಾತ ನಡೆದ ಸ್ಥಳವನ್ನು ತೋರಿಸುವಂತೆ ಕೋರಿದ್ದು, ಅದರಂತೆ ಅವರು ಅಪಘಾತ ಸ್ಥಳವನ್ನು ಪೊಲೀಸರಿಗೆ ತೋರಿಸಿದ್ದು, ಪೊಲೀಸರು ಸ್ಥಳವನ್ನು ಪರಿಶೀಲಿಸಿ ಸ್ಥಳದ ವಿವರವನ್ನು ನಮೂದು ಮಾಡಿಕೊಂಡು ಸ್ಥಳದಲ್ಲಿ ಇದ್ದ ವಾಹನಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 6) ಪ್ರಾಸಾ-4 ಅನಿಲ್ ಕುಮಾರ್ ರವರು ತಮ್ಮ ಸಾಕ್ಷ್ಯದಲ್ಲಿ ಕೆಕೆಬಿ ಬಸ್ ನಲ್ಲಿ ಅವರು ಕಂಡಕ್ಟರ್ ಕೆಲಸ ಮಾಡಿಕೊಂಡು ಹೊರನಾಡಿನಿಂದ ಕೊಟ್ಟಿಗೆಹಾರಕ್ಕೆ ಹೋಗುವಾಗ ಕಲ್ಮಕ್ಕಿ ಬಸ್ ಸ್ಟ್ಯಾಪ್ ಬಳಿ ಜನರನ್ನು ಅತ್ತಿಸಿಕೊಂಡು ಸ್ವಲ್ಪ ಮುಂದೆ ಹೋದಾಗ ಒಂದು ಕಾರು ಬಂದು ಬಸ್ಸಿಗೆ ಗುದ್ದಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 7) ಪ್ರಾಸಾ-4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಕಾರಿನಿಂದ ಒಬ್ಬ ಮಹಿಳೆ ಇಳಿದು ತಪ್ಪಾಯಿತು ಎಂದು ಹೇಳಿ ಆಸ್ಪತ್ರೆಗೆ ಹೋಗುವ ವ್ಯವಸ್ಥೆ ಮಾಡಿಕೊಡುವಂತೆ ಕೇಳಿದಾಗ ಅವರು ಆಟೋದಲ್ಲಿ ಕಾರಿನಲ್ಲಿದ್ದವರನ್ನು ಕಳಸ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 8) ಪ್ರಾಸಾ-8 ಡಾ. ಸುಂದರೇಶ್ ರವರು ತಮ್ಮ ಸಾಕ್ಷ್ಯದಲ್ಲಿ ದಿ.27.05.2023 ರಂದು ಗುತ್ತಿಗೆ ಆಧಾರದ ಮೇಲೆ ಕಳಸ ಆರೋಗ್ಯ ಕೇಂದ್ರದಲ್ಲಿ ವೈದ್ಯಾಧಿಕಾರಿಯಾಗಿದ್ದ

ಡಾ.ವಿಜಯ್ ರವರು ಮೃತ ಆಂಥೋನಿ ಮಥಾಯಿಸ್ ರವರ ಮೃತ ದೇಹವನ್ನು ಮರಣೋತ್ತರ ಶವ ಪರೀಕ್ಷೆ ಮಾಡಿ ಆ ಬಗ್ಗೆ ಪೋಸ್ಟ್ ಮಾರ್ಟಮ್ ಪುಸ್ತಕದಲ್ಲಿ ನಮೂದು ಮಾಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 9) ಪ್ರಾಸಾ-8 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಸದರಿ ಮೃತರ ಪಿ.ಎಂ. ವರದಿ ನೀಡುವಂತೆ ಕಳಸ ಪೋಲಿಸರು ಕೇಳಿದ್ದರಿಂದ, ಕಳಸ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಇರುವ ಪೋಸ್ಟ್ ಮಾರ್ಟಮ್ ಪುಸ್ತಕದಲ್ಲಿ ಲಭ್ಯವಿದ್ದ ಮಾಹಿತಿ ಮೇರೆಗೆ ಪಿ.ಎಂ. ವರದಿಯನ್ನು ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 10) ಪ್ರಾಸಾ-8 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಪುಸ್ತಕದಲ್ಲಿ ಲಭ್ಯವಿದ್ದ ಮಾಹಿತಿಯ ಪ್ರಕಾರ, ಮೃತರ ತಲೆಯ ಎಡಭಾಗದಲ್ಲಿ ಊತದ ಗಾಯ ಇದ್ದು, ಅದು ಮೃತರ ಹೃದಯ ಸ್ತಬ್ದಕ್ಕೆ ಕಾರಣವಾಗಿ ಮರಣ ಹೊಂದಿರುತ್ತಾರೆ ಎಂದು ಅಭಿಪ್ರಾಯ ಪಟ್ಟಿದ್ದು, ಅವರು ಈಗ ನೋಡುತ್ತಿರುವ ಪಿ.ಎಂ. ವರದಿಯನ್ನು ಪೋಲಿಸರಿಗೆ ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 11) ಪ್ರಾಸಾ-9 ಜೆ.ಎಂ.ಶಂಭುಶೇಖರ್ ರವರು ತಮ್ಮ ಸಾಕ್ಷ್ಯದಲ್ಲಿ ದಿ.29.05.2023 ರಂದು ಚಾಸಾ-21 ರವರಿಂದ ಪ್ರಕರಣದ ಸಂಬಂಧ ವಾಹನ ತಪಾಸಣೆಗೆಂದು ಕೋರಿಕೆ ಸ್ವೀಕರಿಸಿ, ಅದೇದಿನ ಕಳಸ ಪೋಲಿಸ್ ಕ್ವಾಟ್ರಸ್ ಆವರಣದಲ್ಲಿ ನಿಂತಿದ್ದ KA-18-B-1419 ವಾಹನ ಮತ್ತು KA-05-NB-3270 ವಾಹನಗಳನ್ನು ಪರಿಶೀಲಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 12) ಪ್ರಾಸಾ-9 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ KA-18-B-1419 ವಾಹನವು ಅಶೋಕ್ ಲೇ ಲ್ಯಾಂಡ್ ಕಂಪೆನಿಯ ಬಾರೀ ಪ್ರಮಾಣದ ಪ್ರಯಾಣಿಕ ವಾಹನವಾಗಿದ್ದು ಬಿಳಿ, ನೀಲಿ ಮತ್ತು ಹಳದಿ ಬಣ್ಣದ ವಾಹನವಾಗಿದ್ದು, ಸದರಿ ವಾಹನವನ್ನು ಪರಿಶೀಲಿಸಿದಾಗ ಮುಂಬದಿಯ ಬಲಭಾಗದ ಶೇಪ್, ಬಲಭಾಗದ ಬಂಪರ್, ಬಲಭಾಗದ ಹೆಡ್ ಲೈಟ್ ಮತ್ತು ಇಂಡಿಕೇಟರ್, ಮುಂಬದಿ ಬಲಭಾಗದ ಮಡ್ ಗಾರ್ಡ್ ಹಾಗೂ ಬಲಭಾಗದ ಬಾಡಿ

ಜಖಂಗೊಂಡಿದ್ದು, ಸದರಿ ವಾಹನವನ್ನು ಚಲಾವಣೆ ಸ್ಥಿತಿಯಲ್ಲಿ ಪರಿಶೀಲಿಸಿದಾಗ ವಾಹನ ಬ್ರೇಕ್ ಸಿಸ್ಟಮ್ ಸುಸ್ಥಿತಿಯಲ್ಲಿ ಇತ್ತು ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 13) ಪ್ರಾಸಾ-9 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ KA-05-NB-3270 ವಾಹನವು ಮಾರುತಿ ಸುಜುಕಿ ಎಕ್ಸ್ ಎಲ್ ಜೇಟಾ ನೀಲಿ ಬಣ್ಣದ ವಾಹನನವಾಗಿದ್ದು, ಅದನ್ನು ಪರಿಶೀಲಿಸಿದಾಗ ಸದರಿ ವಾಹನದ ಬಾನೆಟ್, ಮುಂಭಾಗದ ಬಂಪರ್, ರೇಡಿಯೇಟರ್ ಅಸೆಂಬ್ಲಿ, ಬಲಭಾಗದ ಹೆಡ್ ಲೈಟ್ ಮತ್ತು ಇಂಡಿಕೇಟರ್, ಬಲಭಾಗದ ಫೆಂಡರ್, ಬಲಭಾಗದ ಮಡ್ ಗಾರ್ಡ್ ಮತ್ತು ಮುಂಬಾಗದ ಗಾಜು ಜಖಂಗೊಂಡಿರುತ್ತದೆ. ಸದರಿ ವಾಹನವನ್ನು ನಿಂತ ಸ್ಥಿತಿಯಲ್ಲಿ ಪರಿಶೀಲಿಸಿದಾಗ ವಾಹನ ಬ್ರೇಕ್ ಸಿಸ್ಟಮ್ ಸುಸ್ಥಿತಿಯಲ್ಲಿ ಇತ್ತು ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 14) ಪ್ರಾಸಾ-10 ಗಜೇಂದ್ರ ಎಂ. ರವರು ತಮ್ಮ ಸಾಕ್ಷ್ಯದಲ್ಲಿ ದಿ.27.05.2023 ರಂದು ಪ್ರಕರಣದ ಕಡತವನ್ನು ಚಾಸಾ-19 ರವರಿಂದ ಸ್ವೀಕರಿಸಿ, ತನಿಖೆ ಮುಂದುವರೆಸಿ, ಕೃತ್ಯ ನಡೆದ ಸ್ಥಳವಾದ ಮಾವಿನಕೆರೆ ಗ್ರಾಮದ ಕಳಸ-ಮರಸಣಿಗೆ ರಸ್ತೆಯ ಮಧ್ಯದಲ್ಲಿ ಚಾಸಾ-2 ಮತ್ತು 3 ರವರ ಸಮಕ್ಷಮ ಚಾಸಾ-1 ರವರು ಸ್ಥಳ ತೋರಿಸಿದಂತೆ ಕೃತ್ಯ ನಡೆದ ಸ್ಥಳದ ಮಹಜರ್ ಕ್ರಮ ಜರುಗಿಸಿ ಪೋಟೋ ತೆಗೆಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 15) ಪ್ರಾಸಾ-10 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಅಪಘಾತಕ್ಕೀಡಾದ KA-05-NB-3270 ಮಾರುತಿ ಸುಜುಕೀ ಕಾರು KA-18-B-1419 ಖಾಸಗಿ ಬಸ್ಸನ್ನು ನಿಯಮಾನುಸಾರ ವಶಕ್ಕೆ ಪಡೆದು ಠಾಣೆಗೆ ಹಾಜರಾಗಿ ಪಿ.ಎಫ್.ನಂ.49/2023 ಗೆ ಅಳವಡಿಸಿ ನ್ಯಾಯಾಲಯದ ಅನುಮತಿ ಪಡೆದಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 16) ಪ್ರಾಸಾ-10 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಪ್ರಕರಣದ ಸಂಬಂಧ ಮೃತ ಅಂಥೋನಿ ಮಥಾಯಿಸ್ ರವರ ಮೃತ ದೇಹದ ಶವಪಂಚನಾಮೆಯನ್ನು ಕಳಸಾದ ಸರ್ಕಾರಿ ಆಸ್ಪತ್ರೆಯ ಶವಗಾರದಲ್ಲಿ ಮೃತ ಸಂಬಂಧಿಕಾರಾದ ಚಾಸಾ-6 ರಿಂದ 8 ಹಾಗೂ ಪಂಚರಾದ

ಚಾಸಾ-4 ಮತ್ತು 5 ರವರ ಸಮಕ್ಷಮ ಜರುಗಿಸಿ, ಪೋಟೋ ತೆಗೆಸಿ ಚಾಸಾ-6 ರಿಂದ 8 ರವರ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 17) ಪ್ರಾಸಾ-10 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ತನಿಖೆ ಕಾಲದ ಪೋಟೋಗಳ ಸಂಬಂಧ ಚಾಸಾ-18 ರವರಿಂದ ದೃಢೀಕರಣ ಪತ್ರ ಪಡೆದು, ಆರೋಪಿಗೆ ನೋಟೀಸು ಜಾರಿ ಮಾಡಿ, ತನಿಖೆಗೆ ಸಹಕರಿಸುವಂತೆ ತಿಳಿಸಿ ಕಳುಹಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 18) ಪ್ರಾಸಾ-11 ಸಿ.ಎನ್. ರಮೇಶ್ ರವರು ತಮ್ಮ ಸಾಕ್ಷ್ಯದಲ್ಲಿ ದಿ.28.05.2023 ರಂದು ಚಾಸಾ-20 ರವರಿಂದ ಕಡತವನ್ನು ಪಡೆದು, ಮುಂದಿನ ತನಿಖೆಯನ್ನು ಮುಂದುವರಿಸಿ, ಅದೇ ದಿನ ಅಪಘಾತಕ್ಕೀಡಾದ ವಾಹನದ ಸಂಖ್ಯೆ KA-18-B-1419 ಬಸ್ ಮಾಲೀಕರಾದ ಚಾಸಾ-15 ರವರಿಗೆ ಬಸ್ ದಾಖಲಾತಿಗಳನ್ನು ಹಾಜರುಪಡಿಸುವಂತೆ ನೋಟೀಸು ಜಾರಿ ಮಾಡಲಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 19) ಪ್ರಾಸಾ-11 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಚಾಸಾ-9 ರಿಂದ 12 ಮತ್ತು ಚಾಸಾ-15 ರವರ ಹೇಳಿಕೆಯನ್ನು ಪಡೆದು, ದಿ.29.05.2023 ರಂದು ಚಾಸಾ-14 ರವರಿಗೆ ನೋಟೀಸನ್ನು ಜಾರಿ ಮಾಡಿ, ಅಪಘಾತಕ್ಕೀಡಾದ ಬಸ್ಸಿನ KA-18-B-1419, ಮತ್ತು KA-05-NB-3270 ಕಾರಿನ ಕುರಿತು IMV ವರದಿಯನ್ನು ನೀಡಲು ಕೋರಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 20) ಪ್ರಾಸಾ-11 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿ.05.06.2023 ರಂದು ಚಾಸಾ-14 ರವರಿಂದ IMV ವರದಿಯನ್ನು ಪಡೆದು, ಚಾಸಾ-15 ರವರಿಂದ ನಷ್ಟ ಭರ್ತಿ ಪರಿಹಾರ ಬಾಂಡ್ ತೆಗೆದುಕೊಂಡು, ಬಸ್ಸನ್ನು ಬಿಡುಗಡೆ ಮಾಡಿಡಲಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 21) ಪ್ರಾಸಾ-11 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿ.13.06.2023 ರಂದು ಚಾಸಾ-17 ರವರಿಂದ ನಷ್ಟ ಭರ್ತಿ ಪರಿಹಾರ ಬಾಂಡ್ ತೆಗೆದುಕೊಂಡು ಕಾರನ್ನು ಬಿಡುಗಡೆ ಮಾಡಿ, ದಿ.08.06.2023 ರಂದು ತನಿಖೆಯನ್ನು ಮುಕ್ತಾಯಗೊಳಿಸಿ, ದೋ.ಪ.ಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 22) ಪ್ರಾಸಾ-14 ಆಲವಯನ್ ವಾಜ್ ರವರು ತಮ್ಮ ಸಾಕ್ಷ್ಯದಲ್ಲಿ ದಿ.27.05.2023 ರಂದು ಅವರ ಕುಟುಂಬಸ್ಥರು ಕರೆ ಮಾಡಿ, ರಸ್ತೆ ಅಪಘಾತದಲ್ಲಿ ಅವರ ಮಾವ ಮೃತ ಪಟ್ಟಿರುವ ವಿಷಯವನ್ನು ತಿಳಿಸಿದ್ದು, ನಂತರ ಅವರು ಬೆಂಗಳೂರಿನಿಂದ ತಕ್ಷಣ ಕಳಸಕ್ಕೆ ಹೊರಟು, ಕಳಸಕ್ಕೆ ತಲುಪಿ, ಪ್ರದೀಪ್ ಎಂಬ ಅಧಿಕಾರಿಯನ್ನು ಸಂಪರ್ಕ ಮಾಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 23) ಪ್ರಾಸಾ-14 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಅವರು ಅವರ ಬಳಿ ವಾಹನದ ಆರ್.ಸಿ ಮತ್ತು ಪರವಾನಿಗೆಯನ್ನು ಪಡೆದು, ಅವರ ಕುಟುಂಬಸ್ಥರನ್ನು ಕರೆದುಕೊಂಡು ಅವರು ಹಿಂದಿರುಗಿದ್ದು, ಕಾರು ಮತ್ತು ಬಸ್ ನ ನಡುವೆ ಅಪಘಾತವಾಗಿರುವ ಕುರಿತು ಅವರಿಗೆ ಮಾಹಿತಿಯು ತಿಳಿದಿದ್ದು, ಸದರಿ ಕಾರ್ ಅವರಿಗೆ ಸೇರಿದ್ದು ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 24) ನೀವು ನ್ಯಾಯಾಲಯಕ್ಕೆ ಹೆಚ್ಚಿಗೆ ಏನಾದರೂ ಹೇಳಲು ಇದೆಯೇ?

ಆರೋಪಿಯ ಉತ್ತರಃ

ಪ್ರಶ್ನೆಃ 25) ನಿಮ್ಮ ಪರ ಸಾಕ್ಷ್ಯ ವಿಚಾರಣೆ ಇದೆಯೇ ?

ಆರೋಪಿಯ ಉತ್ತರಃ

(ಮೇಲಿನ ಸಾಕ್ಷಿದಾರರ ಎಲ್ಲಾ ಹೇಳಿಕೆಗಳನ್ನು ಶೀಘ್ರಲಿಪಿಗಾರರಿಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ಆರೋಪಿತರಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಂಡಿರುತ್ತೇನೆಂದು ದೃಢಪಡಿಸಿಕೊಳ್ಳಲಾಗಿದೆ)

Sd/-
ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಮ್‌ಎಫ್‌ಸಿ
ನ್ಯಾಯಾಲಯ, ಮೂಡಿಗೆರೆ.

ಮೂಡಿಗೆರೆ
ದಿನಾಂಕಃ 09.09.2025.